## ವಾಗ್ದಾನ

1. ನಾನು/ನಾವು ಈ ಅರ್ಜಿಯಲ್ಲಿ ನಮೂದಿಸಿದ ಕಿರು ಅವಧಿಯ ವೈಯಕ್ತಿಕ ಸಾಲಕ್ಕಾಗಿ ಹಣಕಾಸು ಸೌಲಭ್ಯಕ್ಕೆ **("ಸೌಲಭ್ಯ")** ಈ ಮೂಲಕ ಅರ್ಜಿ ಸಲ್ಲಿಸುತ್ತೇವೆ. ನಾನು/ನಾವು ಈ ಅರ್ಜಿ ನಮೂನೆಯಲ್ಲಿ ಒದಗಿಸಿರುವ/ಭರ್ತಿ ಮಾಡಿರುವ ಎಲ್ಲ ವಿವರಗಳು ಮತ್ತು ಮಾಹಿತಿಗಳು ಮತ್ತು ವಿವರಣೆಗಳು ಎಲ್ಲ ಅಂಶಗಳಲ್ಲಿಯೂ ಸತ್ಯ, ಸರಿ, ಸಂಪೂರ್ಣ ಮತ್ತು ಇತ್ತೀಚಿನದ್ದಾಗಿದೆ ಎಂದು ಹಾಗು ಯಾವುದೇ ಮಾಹಿತಿಯನ್ನು ತಡೆಹಿಡಿದಿಲ್ಲ ಎಂದು ದೃಢೀಕರಿಸುತ್ತೇವೆ. ಡಿ.ಎಮ್.ಐ. ಫೈನಾನ್ಸ್ ಪ್ರೈವೇಟ್ ಲಿಮಿಟೆಡ್ ("**ಡಿ.ಎಮ್.ಐ**") ಸಂಸ್ಥೆಯು ನನಗೆ/ನಮಗೆ ಅನುಮೋದಿಸಲು ನಿರ್ಧರಿಸಬಹುದಾದ ಯಾವುದೇ ಸಾಲಕ್ಕೆ ಈ ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಆಧಾರವಾಗತಕ್ಕದ್ದು ಹಾಗು ನಾನು/ನಾವು ಯಾವುದೇ ತಪ್ಪಾದ ಅಥವ ಅಪೂರ್ಣ ಮಾಹಿತಿ, ಕಲ್ಪಿತ ದಾಖಲೆಗಳು ಅಥವ ನಕಲಿ ದಾಖಲೆಗಳನ್ನು ಒದಗಿಸಿದ್ದಾಗಿ ಈ ಅರ್ಜಿಯನ್ನು ಪ್ರಕ್ರಿಯೆಗೊಳಪಡಿಸುವ ಯಾವುದೇ ಹಂತದಲ್ಲಿ ಡಿ.ಎಮ್.ಐ.ಯ ತಿಳುವಳಿಕೆಗೆ ಬಂದರೆ, ನಾನು/ನಾವು ಅವುಗಳನ್ನು ಮೋಸದ ಕೈಚಳಕದಿಂದ ಮಾಡಿದ್ದಾಗಿ ಡಿ.ಎಮ್.ಐ.ಯು ತಿಳಿದುಕೊಳ್ಳುತ್ತದೆ ಹಾಗು ಡಿ.ಎಮ್.ಐ.ಯು ಆಕೂಡಲೇ, ಈ ಅರ್ಜಿಯನ್ನು ಪ್ರಕ್ರಿಯೆಗೆ ಒಳಪಡಿಸುವ ಯಾವುದೇ ಹಂತದಲ್ಲಿಯೂ, ಯಾವುದೇ ಕಾರಣವನ್ನು ನೀಡದೆಯೇ ಈ ಸಾಲ ಅರ್ಜಿಯನ್ನು ತಿರಸ್ಕರಿಸುವ, ಯಾವುದೇ ಮಂಜೂರಾತಿಯನ್ನು ಅಥವ ಮುಂದಿನ ಡ್ರಾಡೌನ್‌ಗಳನ್ನು ರದ್ದುಪಡಿಸುವ / ಹಿಂದೆಗೆದುಕೊಳ್ಳುವ ಅಥವ ಅನುಮೋದಿಸಿದ ಸಾಲವನ್ನು ಮರಳಿಪಡೆಯುವ ಹಕ್ಕು ಹೊಂದಿದೆ ಹಾಗು ಅಂತಹ ನಿರಾಕರಣೆಗೆ ಅಥವ ಅಂತಹ ನಿರಕಾರಣೆಯನ್ನು (ರದ್ದುಪಡಿಸುವ ಪೂರ್ವದಲ್ಲಿ ನನ್ನಿಂದ ಯಾವುದೇ ಮಾರಾಟಗಾರ / ಸೇವಾ ಪೂರೈಕೆದಾರರಿಗೆ ಪಾವತಿಯಾಗಿರಬಹುದಾದ ಯಾವುದೇ ಪಾವತಿಗಳನ್ನೂ ಒಳಗೊಂಡಿದೆ) ನನಗೆ/ನಮಗೆ ತಿಳಿಸುವಲ್ಲಿ ಯಾವುದೇ ವಿಳಂಬಕ್ಕೆ ಡಿ.ಎಮ್.ಐ. ಮತ್ತು ಅದರ ಉದ್ಯೋಗಿಗಳು/ ಪ್ರತಿನಿಧಿಗಳು/ ಮಧ್ಯವರ್ತಿಗಳು / ಸೇವಾ ಪೂರೈಕೆದಾರರು ಯಾವುದೇ ರೀತಿಯಲ್ಲಿಯೂ ನನಗೆ/ನಮಗೆ ಜವಾಬ್ದಾರರಲ್ಲ / ಬಾಧ್ಯಸ್ಥರಲ್ಲ ಎಂದು ನಾನು/ನಾವು ಅರ್ಥಮಾಡಿಕೊಳ್ಳುತ್ತೇವೆ.
2. ಡಿ.ಎಮ್.ಐ.ಯು ಇತರ ಮೂಲಗಳಿಂದ/ಏಜೆಂಟ್‌ಗಳಿಂದ ಕೂಡ ವೈಯಕ್ತಿಕ ಮಾಹಿತಿಯನ್ನು ಪಡೆದುಕೊಳ್ಳುತ್ತದೆ ಎಂದು ನಾನು/ನಾವು ಅರ್ಥಮಾಡಿಕೊಂಡಿದ್ದೇವೆ ಹಾಗು ನನಗೆ/ನಮಗೆ ಅದರ ಕುರಿತು ಯಾವುದೇ ಆಕ್ಷೇಪಣೆ ಇರುವುದಿಲ್ಲ. ನಾನು/ನಾವು ಬ್ಯಾಂಕ್ ಖಾತೆಗಳನ್ನು ಹೊಂದಿರುವ ಬ್ಯಾಂಕ್‌ಗಳಿಂದಲೂ ಸೇರಿದಂತೆ, ಡಿ.ಎಮ್.ಐ.ಯು ಅಗತ್ಯ ಎಂದು ಪರಿಗಣಿಸುವ, ಈ ಅರ್ಜಿಯಲ್ಲಿರುವ ಮಾಹಿತಿಯ ಕುರಿತು ಉಲ್ಲೇಖಿಸಲು ಮತ್ತು ತನಿಖೆ ನಡೆಸಲು ನಾನು/ನಾವು ಡಿ.ಎಮ್.ಐ.ಗೆ ಅಧಿಕಾರ ನೀಡುತ್ತೇವೆ.
3. ಅನ್ವಯಿಸುವ ಕಾನೂನುಗಳ ಕೆಳಗೆ ಅಗತ್ಯವಾದ ಕೆ.ವೈ.ಸಿ. ಉದ್ದೇಶಗಳೂ ಸೇರಿದಂತೆ ಸೌಲಭ್ಯವನ್ನು ಹೊಂದುವ ಉದ್ದೇಶಕ್ಕಾಗಿ ಹಾಗು ಡಿ.ಎಮ್.ಐ.ಯ ಕಾರ್ಯನೀತಿಗಳ ಪ್ರಕಾರವಾಗಿ ಆಧಾರ್ ಕಾರ್ಡ್/ವಿವರಗಳನ್ನು ಬಳಸಿಕೊಳ್ಳುವುದಕ್ಕೆ ನಾನು/ನಾವು ಸ್ವಯಂಪ್ರೇರಿತವಾಗಿ ಈ ಮೂಲಕ ನನ್ನ/ನಮ್ಮ ಅನುಮತಿಯನ್ನು ನೀಡುತ್ತೇವೆ. ನನ್ನ/ನಮ್ಮ ಆಧಾರ ವಿವರಗಳನ್ನು, ನನ್ನ/ನಮ್ಮ ಪ್ಯಾನ್ ಕಾರ್ಡ್‌ನ ಪ್ಯಾನ್ ಸಂಖ್ಯೆ/ನಕಲುಪ್ರತಿಯನ್ನು ಇತರ ಗುರುತು ಪತ್ರಗಳನ್ನು ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ಕಾಲಕಾಲಕ್ಕೆ ಪಡೆಯಲು, ನನ್ನ/ನಮ್ಮ ಸಾಲ ವಿವರಗಳಿಗೆ ಮತ್ತು ಮರುಪಾವತಿಯ ಇತಿಹಾಸಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನು ಇತರ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು / CIBIL ಇತ್ಯಾದಿಗಳೊಂದಿಗೆ ವಿನಿಮಯ ಮಾಡಿಕೊಳ್ಳಲು, ಬಿಟ್ಟುಕೊಡಲು/ಹಂಚಿಕೊಳ್ಳಲು ಹಾಗು ಅಗತ್ಯವಾದಾಗಲೆಲ್ಲ CIBIL, ಎಕ್ಸ್‌ಪೀರಿಯನ್, ಹಂಟರ್ ಮತ್ತು ಅಂತಹ ಇತರ ವರದಿಗಳನ್ನು ನಿಯತಕಾಲಿಕವಾಗಿ ಪಡೆಯಲು / ಉತ್ಪಾದಿಸಲು ಡಿ.ಎಮ್.ಐ.ಗೆ ನಾನು/ನಾವು ಈ ಮೂಲಕ ನನ್ನ/ನಮ್ಮ ಅನುಮತಿಯನ್ನು ನೀಡುತ್ತೇವೆ ಹಾಗು ಈ ಮಾಹಿತಿಯನ್ನು ಬಳಸಿದ್ದಕ್ಕಾಗಿ ಡಿ.ಎಮ್.ಐ.ಯನ್ನು ಬಾಧ್ಯಸ್ಥನಾಗಿ ಮಾಡುವುದಿಲ್ಲ. ನನ್ನ/ನಮ್ಮ ವೈಯಕ್ತಿಕ ಮಾಹಿತಿಯ ಯಾವುದೇ ಅಂಶವನ್ನು ಒಂದೋ ನೇರವಾಗಿ ಅಥವ ಯಾವುದೇ ಅಧಿಕೃತ ಏಜೆನ್ಸಿಗಳ ಮೂಲಕವಾಗಿ ಸಂಗ್ರಹಿಸಲು, ಶೇಖರಿಸಲು, ಪಡೆದುಕೊಳ್ಳಲು ಮತ್ತು ದೃಢಪಡಿಸಿಕೊಳ್ಳಲು ಹಾಗು ಅಂತಹ ಮಾಹಿತಿಯನ್ನು ಅದರ ಮಧ್ಯವರ್ತಿಗಳು/ಗುತ್ತಿಗೆದಾರರು/ಸೇವಾ ಪೂರೈಕೆದಾರರಿಗೆ ತಿಳಿಯಪಡಿಸಲು ಹಾಗೆಯೇ ಅಂತಹ ಮಾಹಿತಿಯನ್ನು ಕೆ.ವೈ.ಸಿ. ದೃಢೀಕರಣ, ಸೌಲಭ್ಯದ ಅನುಮೋದನೆ ಹಾಗು ಡಿ.ಎಮ್.ಐ.ಯಿಂದ ತನ್ನ ವಹಿವಾಟಿನ ಆಂತರಿಕ ಮೌಲ್ಯಮಾಪನದ ಉದ್ದೇಶಗಳಿಗೆ ಬಳಸಿಕೊಳ್ಳಲು, ಡಿ.ಎಮ್.ಐ.ಗೆ ನಾನು/ನಾವು ಈ ಮೂಲಕ ಪ್ರಕಟವಾಗಿ ಮತ್ತು ರದ್ದುಪಡಿಸಲಾಗದಂತೆ ಅಧಿಕಾರ ನೀಡುತ್ತೇವೆ. ಹೆಚ್ಚಿನ ವಿವರಗಳಿಗಾಗಿ https://www.dmifinance.in/privacy-policy.html. ಇಲ್ಲಿ ಕ್ಲಿಕ್ ಮಾಡಿ
4. ಅನ್ವಯಿಸುವ ಕಾನೂನುಗಳ ಅಡಿಯಲ್ಲಿ ಅಗತ್ಯವಾದ ಉದ್ದೇಶಗಳಿಗೆ ಮತ್ತು ಡಿ.ಎಂ.ಐ.(DMI)ಯ ಕಾರ್ಯನೀತಿಗಳ ಪ್ರಕಾರವಾಗಿ ಸಿ.ಇ.ಆರ್.ಎಸ್.ಎ.ಐ. (CERSAI)ನಿಂದ ಸಿ.ಕೆ.ವೈ.ಸಿ. (CKYC) ಯನ್ನು ಪಡೆದುಕೊಳ್ಳುವ ಉದ್ದೇಶಗಳಿಗೆ ಪಿ.ಎ.ಎನ್. (PAN) ಅಥವ ಆಧಾರ್ ಕಾರ್ಡ್/ ವಿವರಗಳನ್ನು ಬಳಸಿಕೊಳ್ಳುವುದಕ್ಕೆ ನಾನು/ನಾವು ಈ ಮೂಲಕ ನನ್ನ/ನಮ್ಮ ಒಪ್ಪಿಗೆಯನ್ನು ಸ್ವಯಂ ಆಗಿ ನೀಡುತ್ತೇನೆ/ವೆ. ಕಾರ್ಯನೀತಿಯ ಪ್ರಕಾರವಾಗಿ ನನ್ನ ಆಧಾರ್ ವಿವರಗಳನ್ನು, ಪಿ.ಎ.ಎನ್. (PAN) ನಂಬರ್/ ನನ್ನ/ನಮ್ಮ ಪಿ.ಎ.ಎನ್. (PAN) ಕಾರ್ಡ್‌ನ ನಕಲು ಪ್ರತಿಯನ್ನು ಇತರ ಗುರುತಿನ ಪುರಾವೆಗಳನ್ನು ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ಕಾಲಕಾಲಕ್ಕೆ ಪಡೆದುಕೊಳ್ಳಲು ಡಿ.ಎಂ.ಐ.(DMI)ಗೆ ನಾನು/ನಾವು ಈ ಮೂಲಕ ನಮ್ಮ ಒಪ್ಪಿಗೆಯನ್ನು ನೀಡುತ್ತೇವೆ ಮತ್ತು ಈ ಮಾಹಿತಿಯ ಬಳಕೆಗಾಗಿ ಡಿ.ಎಂ.ಐ.(DMI)ಯನ್ನು ಬಾದ್ಯಸ್ಥರನ್ನಾಗಿ ಮಾಡುವುದಿಲ್ಲ. ನನ್ನ/ನಮ್ಮ ವೈಯಕ್ತಿಕ ಮಾಹಿತಿಯ ಯಾವುದೇ ಅಂಶವನ್ನು ಸಿ.ಇ.ಆರ್.ಎಸ್.ಎ.ಐ. (CERSAI)ನಿಂದ ನೇರವಾಗಿ ಪಡೆಯಲು, ಸಂಗ್ರಹಿಸಲು, ಹಂಚಿಕೊಳ್ಳಲು, ಹೊಂದಲು ಮತ್ತು ದೃಢೀಕರಿಸಲು ಹಾಗೂ ಅಂತಹ ಮಾಹಿತಿಯನ್ನು ಅದರ ಮಧ್ಯವರ್ತಿಗಳಿಗೆ/ಗುತ್ತಿಗೆದಾರರಿಗೆ/ಸೇವಾ ಪೂರೈಕೆದಾರರಿಗೆ ಬಹಿರಂಗಪಡಿಸಲು ಹಾಗು ಅಂತಹ ಮಾಹಿತಿಯನ್ನು ಕೆ.ವೈ.ಸಿ. (KYC) ದೃಢೀಕರಣದ ಉದ್ದೇಶಕ್ಕೆ, ಸೌಲಭ್ಯದ ಮಂಜೂರಾತಿಯ ಉದ್ದೇಶಕ್ಕೆ ಮತ್ತು ಡಿ.ಎಂ.ಐ.(DMI)ನಿಂದ ತನ್ನ ವ್ಯವಹಾರದ ಆಂತರಿಕ ಮೌಲ್ಯಮಾಪನದ ಉದ್ದೇಶಕ್ಕೆ ಬಳಸಿಕೊಳ್ಳಲು ಕೂಡ ನಾನು/ನಾವು ಈ ಮೂಲಕ ಡಿ.ಎಂ.ಐ.(DMI)ಗೆ ಪ್ರಕಟವಾಗಿ ಮತ್ತು ರದ್ದುಪಡಿಸದಂತೆ ಅಧಿಕಾರ ನೀಡುತ್ತೇವೆ.
5. ನಾನು/ನಾವು ಈ ಸೌಲಭ್ಯವನ್ನು ಪಡೆಯಲು ಈ ಅರ್ಜಿ ನಮೂನೆಯಲ್ಲಿ ನಾನು/ನಾವು ಒದಗಿಸಿದ ಮೊಬೈಲ್ ಸಂಖ್ಯೆ(ಗಳು) ನನ್ನ/ನಮ್ಮ ಆಧಾರ್‌ನೊಂದಿಗೆ ಲಿಂಕ್ ಆಗಿದೆ ಎಂದು ಈ ಮೂಲಕ ಘೋಷಿಸುತ್ತೇವೆ ಮತ್ತು ದೃಢೀಕರಿಸುತ್ತೇವೆ.
6. ಅರ್ಜಿ ನಮೂನೆಯಲ್ಲಿ ಹಾಗೆಯೇ ಈ ವಾಗ್ದಾನದಲ್ಲಿ ನಮೂದಿಸಿದ ನನ್ನ ಮೊಬೈಲ್ ಸಂಖ್ಯೆಗೆ ದೂರವಾಣಿ ಕರೆಗಳ ಮೂಲಕ, ಎಸ್.ಎಮ್.ಎಸ್./ವಾಟ್ಸಪ್‌ಗಳ ಮೂಲಕ ಅಥವ ಇತರ ಯಾವುದೇ ಸಂವಹನ ಮಾಧ್ಯಮದ ಮೂಲಕವಾಗಿ, ಡಿ.ಎಮ್.ಐ.ಯು ಒದಗಿಸಬಹುದಾದ ವಹಿವಾಟಿನ ಕುರಿತ ಮಾಹಿತಿ, ವಿವಿಧ ಸಾಲ ಕೊಡುಗೆ ಯೋಜನೆಗಳು ಅಥವ ಸಾಲ ಪ್ರಚಾರ ಯೋಜನೆಗಳನ್ನು ತಿಳಿದುಕೊಳ್ಳಲು ನಾನು/ನಾವು ಇಚ್ಛಿಸುತ್ತೇವೆ ಹಾಗು ಆ ರೀತಿ ಮಾಡಲು ಡಿ.ಎಮ್.ಐ.ಗೆ ಮತ್ತು ಅದರ ಉದ್ಯೋಗಿ, ಮಧ್ಯವರ್ತಿ, ಸಹವರ್ತಿಗಳಿಗೆ ಈ ಮೂಲಕ ಅಧಿಕಾರ ನೀಡುತ್ತೇವೆ. ಟೆಲಿಕಾಮ್ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯವು "ನ್ಯಾಷನಲ್ ಡು ನಾಟ್ ಕಾಲ್ ರಿಜಿಸ್ಟ್ರಿ" ("NDNC" ರಿಜಿಸ್ಟ್ರಿ)ಯಲ್ಲಿ ಉಲ್ಲೇಖಿಸಿದ ಅನಪೇಕ್ಷಿತ ಸಂವಹನಕ್ಕೆ ಸಂಬಂಧಿಸಿದಂತೆ ವಿಧಿಸಿದ ಕಾನೂನುಗಳು ಡಿ.ಎಮ್.ಐ., ಅದರ ಉದ್ಯೋಗಿಗಳು, ಮಧ್ಯವರ್ತಿಗಳು ಮತ್ತು/ಅಥವ ಸಹವರ್ತಿಗಳಿಂದ ಸ್ವೀಕರಿಸುವ ಅಂತಹ ಸಂವಹನ/ಕರೆಗಳು/ವಾಟ್ಸಪ್ ಸಂದೇಶಗಳಿಗೆ ಅನ್ವಯಿಸುವುದಿಲ್ಲ ಎಂದು ನಾನು ದೃಢೀಕರಿಸುತ್ತೇನೆ.
7. ಮೂಲ ಪಾಲುದಾರ ಮತ್ತು ಡಿ.ಎಮ್.ಐ.ಯು ಪರಸ್ಪರ ಸ್ವತಂತ್ರರು ಹಾಗು ಮೂಲ ಪಾಲುದಾರರು ವ್ಯವಸ್ಥೆ ಮಾಡಿದ/ ಒದಗಿಸಿದ ಆದರೆ ಡಿ.ಎಮ್.ಐ.ಯು ಮಂಜೂರು ಮಾಡದ/ ಬಿಡುಗಡೆ ಮಾಡದ ಯಾವುದೇ ಸಾಲ ಅಥವ ಸೌಲಭ್ಯಕ್ಕಾಗಿ ಡಿ.ಎಮ್.ಐ.ಯ ವಿರುದ್ಧ ನನಗೆ/ನಮಗೆ ಯಾವುದೇ ಹಕ್ಕುಕೋರಿಕೆ ಇರುವುದಿಲ್ಲ ಎಂದು ನಾನು/ನಾವು ಅಂಗೀಕರಿಸುತ್ತೇವೆ. ಮೂಲ ಪಾಲುದಾರರು ಒದಗಿಸಬಹುದಾದ ಯಾವುದೇ ಇತರ ಸೇವೆಯ ಉತ್ಪನ್ನಗಳಿಗೆ ಡಿ.ಎಮ್.ಐ.ಯು ಯಾವುದೇ ರೀತಿಯಲ್ಲಿ ಯಾವುದೇ ನಿರೂಪಣೆ, ಭರವಸೆ, ಹೇಳಿಕೆ ಅಥವ ಸಮ್ಮತಿಯನ್ನು ನೀಡುವುದಿಲ್ಲ ಹಾಗು ಆ ವಿಷಯವಾಗಿ ಅದು ಯಾವುದೇ ರೀತಿಯಲ್ಲಿ ಬಾಧ್ಯಸ್ಥವಾಗುವುದಿಲ್ಲ ಎಂದು ನಾನು ಅಂಗೀಕರಿಸುತ್ತೇನೆ.
8. ಈ ಅರ್ಜಿ ನಮೂನೆಯಲ್ಲಿ ಅಗತ್ಯಪಡಿಸಿದ ಅಥವ ಡಿ.ಎಮ್.ಐ.ಗೆ ಕಾಲಕಾಲಕ್ಕೆ ಅಗತ್ಯವಾಗಬಹುದಾದ ಮಾಹಿತಿಯನ್ನು ಒದಗಿಸದಿರುವ ಆಯ್ಕೆಯು ನನಗೆ/ನಮಗೆ ಇದೆ, ಪರಂತು ಅಂತಹ ಆಯ್ಕೆಯನ್ನು ಚಲಾಯಿಸಿದರೆ ಮಂಜೂರಾತಿಯನ್ನು ರದ್ದುಪಡಿಸುವ ಅಥವ GC ಯ ನಿಬಂಧನೆಗಳಿಗೆ ಅನುಗುಣವಾಗಿ ಬಾಕಿ ಇರುವ ಮೊತ್ತಗಳ ಪೂರ್ವಪಾವತಿಯನ್ನು ಕೇಳುವ ಹಕ್ಕನ್ನು ಡಿ.ಎಮ್.ಐ. ಹೊಂದಿದೆ ಎಂದು ನಾನು ನಾವು ಅರ್ಥಮಾಡಿಕೊಂಡಿದ್ದೇವೆ.
9. ನನ್ನ/ನಮ್ಮ ಅರ್ಜಿ ನಮೂನೆಯನ್ನು ಸಂಗ್ರಹಿಸುವ ವ್ಯಕ್ತಿಗೆ ಈ ಅರ್ಜಿ ನಮೂನೆಯೊಂದಿಗೆ ಅಥವ ಅದಕ್ಕೆ ಸಂಬಂಧಿಸಿದಂತೆ ನಾನು/ನಾವು ನಗದಾಗಿ, ಬೇರರ್ ಚೆಕ್‌ಗಳಾಗಿ ಅಥವ ಇತರ ಯಾವುದೇ ರೀತಿಯಲ್ಲಿ ಯಾವುದೇ ಪಾವತಿಯನ್ನು ಮಾಡಿಲ್ಲ ಎಂದು ನಾನು/ನಾವು

ಘೋಷಿಸುತ್ತೇವೆ. ಈ ಅರ್ಜಿ ನಮೂನೆಯನ್ನು ಸಂಗ್ರಹಿಸುವ ವ್ಯಕ್ತಿಗೆ ನಾವು ಅಂತಹ ಯಾವುದೇ ಪಾವತಿ ಮಾಡಿದ್ದರೆ ಅದಕ್ಕೆ ನಾನು/ನಾವು ಡಿ.ಎಮ್.ಐ.ಯನ್ನು ಅಥವ ಅದರ ಉದ್ಯೋಗಿಗಳು/ ಪ್ರತಿನಿಧಿಗಳು/ ಮಧ್ಯವರ್ತಿಗಳು / ಸೇವಾ ಪೂರೈಕೆದಾರರನ್ನು ಬಾಧ್ಯಸ್ಥರನ್ನಾಗಿ ಮಾಡತಕ್ಕದ್ದಲ್ಲ.

10. ನನ್ನ ಕುಟುಂಬದ ಒಟ್ಟೂ ಆದಾಯವು ಮಾಹೆಯಾನ 25000ಕ್ಕಿಂತ ಹೆಚ್ಚಿದೆಯೆಂದು ನಾನು ಈ ಮೂಲಕ ಘೋಷಿಸುತ್ತೇನೆ**.
11. ನಾನು ರಾಜಕೀಯ ಸಂಘಟನೆಗಳಲ್ಲಿ ಯಾವುದೇ ಸ್ಥಾನಮಾನವನ್ನು ಹೊಂದಿಲ್ಲವೆಂತಲೂ ಅಥವ ಪರೋಕ್ಷವಾಗಿಯೂ ಸಂಬಂಧ ಹೊಂದಿಲ್ಲವೆಂತಲೂ ನಾನು ಈ ಮೂಲಕ ಘೋಷಿಸುತ್ತೇನೆ.
12. **<u>ಅರ್ಜಿ ನಮೂನೆಯ ನಿಬಂಧನೆಗಳನ್ನು ನಾನು/ನಾವು ಅರ್ಥಮಾಡಿಕೊಂಡಿದ್ದೇವೆ ಎಂದು ನಾನು/ನಾವು ದೃಢೀಕರಿಸುತ್ತೇವೆ.</u>**

**ಕುಟುಂಬ ಎಂದರೆ ಒಂದು ವ್ಯಕ್ತಿಗತ ಕೌಟುಂಬಿಕ ಘಟಕ, ಎಂದರೆ, ಪತಿ, ಪತ್ನಿ, ಮತ್ತು ಅವರ ಅವಿವಾಹಿತ ಮಕ್ಕಳು ಎಂದರ್ಥ.